ದಿನಾಂಕ: 12-09-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಮಾಡಿಸಲಾಯಿತು:-
ಪಾಟೀ ಸವಾಲು: ಪ್ರತಿವಾದಿಗಳ ಪರ ವಕೀಲರಿಂದ :-

ದಿನಾಂಕ 14.01.2003 ರಂದು 2 ನೇ ಪ್ರತಿವಾದಿ, 3 ನೇ ಪ್ರತಿವಾದಿ ಮತ್ತು ವಾದಿಯ ತಾಯಿ ಪ್ರೇಮ ಇವರುಗಳು ಒಂದು ಜುಬಾನೆ ಪಾಲು ಪಾರಿಕತ್ತು ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಆ ಪಾಲು ವಿಭಾಗದ ಆಧಾರದಂತೆ ತಮ್ಮ ತಮ್ಮ ಹಿಸ್ಸೆಯಲ್ಲಿ ಅವರುಗಳು ಸ್ವಾಧೀನವನ್ನು ಕೂಡ ಹೊಂದಿದ್ದಾರೆ ಎಂದರೆ ಸರಿಯಲ್ಲ. ಮೂಲ ಪಾಲು ಪಾರಿಕತ್ತು ನನ್ನ ತಾಯಿಯ ಬಳಿಯೇ ಇತ್ತು ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಕಟ್ಟಿಕೊಂಡಿರುವ ಆರ್.ಸಿ.ಸಿ ಮನೆ ಅವರ ಸ್ವಂತ ದುಡಿಮೆಯಿಂದ ಕಟ್ಟಿಕೊಂಡತಹ ಮನೆ ಎಂದರೆ ಸರಿಯಲ್ಲ. ಸದರಿ ಮನೆಯ ಮೇಲೆ ನನಗಾಗಲೀ ಉಳಿದ ಪ್ರತಿವಾದಿಗಳಿಗೆ ಆಗಲಿ ಯಾವುದೇ ರೀತಿ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಯ ಜೀವಿತಾವಧಿಯಲ್ಲಿಯೇ ಪಾಲು ಆಗಿರುವುದರಿಂದ ಮತ್ತು ಪಾರಿಕತ್ತಿಗೆ ಆಕೆ ಸಹಿ ಕೂಡ ಹಾಕಿರುವುದರಿಂದ ಈ ದಾವೆಯನ್ನು ಹಾಕಲು ನನಗೆ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ
ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.